# ಭಕ್ತಿಗಳಿಗೆ ಕಷ್ಟಗಳೆ ಇಷ್ಟ!

ಭಕ್ತಿ ಭಾವದಿಂದ ಪರಿಪ್ಲುತವಾದ ಸ್ತೋತ್ರಗಳನ್ನು- ಹಾಡುಗಬ್ಬಗಳನ್ನು ಕೇಳದವರಿಲ್ಲ. ಎಲ್ಲ ಧರ್ಮಗಳಲ್ಲು ದೇವರ ಮುಂದೆ ತನ್ನನ್ನೇ ತೋಡಿಕೊಂಡ ಹೃದಯಂಗಮವಾದ ಸ್ತುತಿಗೀತೆಗಳಿವೆ. ದೇವರು ಇದ್ದಾನೋ ಇಲ್ಲವೋ ಅದು ಬೇರೆಯೇ ಮಾತು. ತನ್ನನ್ನು ತಾನು ತೋಡಿಕೊಳ್ಳಬೇಕಾದ ಅಗತ್ಯವಂತೂ ಮನುಷ್ಯಜೀವಕ್ಕೆ ಇದ್ದೇ ಇದೆ. ದೇವರ ಸಾಕ್ಷಾತ್ಕಾರ ಆಗುವುದೋ ಹಾಗೊಂದು ಸಾಕ್ಷಾತ್ಕಾರ ಇದೆಯೋ ಅದು ಬೇರೆ ಮಾತು. ತನ್ನ ಸಾಕ್ಷಾತ್ಕಾರವನ್ನಂತೂ ದೇವರಿಗೆ ಮಾಡಿಕೊಡಬೇಕಾದ ಅಗತ್ಯ ಮನುಷ್ಯರಿಗೆ ಇದೆ. ತೋಡಿಕೊಳ್ಳುವುದೆಂದರೆ ತನ್ನನ್ನು ದೇವರ ಮುಂದೆ ತೆರೆಯುವುದೇ ಆಗಿದೆಯಲ್ಲವೆ?

ಇಂಥ ಅನೇಕ ಭಕ್ತಿಗೀತೆಗಳಿಂದ ಭಾಗವತ ನಿಬಿಡವಾಗಿದೆ. ಅವುಗಳಲ್ಲಿ ಒಂದು ಕುಂತಿದೇವಿ, ಕೃಷ್ಣನನ್ನು ಮಾಡಿದ ಸ್ತುತಿ. ಈ ಸ್ತುತಿಯಲ್ಲಿ ಎಂಥ ಅರಿವು- ಸಾಮಾಜಿಕವಾಗಿ ಕ್ರಾಂತಿಕಾರಕವೂ ಆದ ಅರಿವು ಅಡಗಿದೆ ಎಂದು ನೋಡಬೇಕು.

ಇಪ್ಪತ್ತಾರು ಹಾಡುಗಳಲ್ಲಿ ಹರಿದು ಬಂದಿರುವ ಈ ಭಾವಗೀತಾತ್ಮಕವಾದ ಸ್ತುತಿಯಲ್ಲಿ ಕೃಷ್ಣನೆಂಬ ತತ್ವವು ಪ್ರಕೃತಿಯ ಆಚೆಗೂ ಚಾಚಿರತಕ್ಕ ಸತ್ಯ ಎಂಬ ಅರಿವಿನಿಂದ ಕೂಡಿದ ತತ್ವಜ್ಞಾನವಿದೆ

ಈಶ್ವರಂ ಪ್ರಕೃತೇಃ ಪರಂ

ಅದು ಒಳಹೊರಗೆಲ್ಲ ವ್ಯಾಪಿಸಿದ್ದರೂ ನಮಗೆ ಕಾಣದೇ ಇದೆಯಲ್ಲ, ಏನಿದು ನಮ್ಮ ಪಾಡು ಎಂಬ ವಿಚಿತ್ರ ವಿಷಾದವಿದೆ ಅಲಕ್ಷ್ಯಂ ಸರ್ವಭೂತಾನಾಂ ಅಂತರ್ಬಹಿರವಸ್ಥಿತಮ್. ಎಲ್ಲೆಡೆ ಇದೆ ಎಂದ ಮೇಲೆ ಅದಕ್ಕೆ ಪ್ರಿಯರಾದವರೂ ಅಪ್ರಿಯರಾದವರೂ ಯಾರೂ ಇರಲಿಕ್ಕಿಲ್ಲ- ಹಾಗಿದೆ ಎಂದು ಭಾವಿಸುವುದು ನಮ್ಮ ಮನಸ್ಸಿನ ಪಾಡಷ್ಟೇ ಎಂಬ ಸೂಕ್ಷ್ಮ ಅವಲೋಕನವಿದೆ ನಯಸ್ಯ ಕಶ್ಚಿತ್ ದಯಿತೋಸ್ತಿ ಕರ್ಹಿಚಿತ್ ದ್ವೇಷ್ಯಶ್ಚ- ನಮ್ಮ ಮನಸ್ಸೇ ನಮ್ಮ ಸೆರೆಮನೆಯೋ ಎಂಬ ಆತಂಕವಿದೆ.

ಆ ನಿಜಕ್ಕೆ ಪರ್ಯಾಯವಾದುದು ಯಾವುದೂ ಇಲ್ಲ ಈ ಲೋಕದಲ್ಲಿ. ಆದರೆ ನಾವು ಜಾತಿ; ಸಂಪತ್ತು; ವಿದ್ಯೆ, ಅಧಿಕಾರ ಕೇಂದ್ರಗಳನ್ನು ಸೃಷ್ಟಿಸಿ ನಿಜದ ನಾಮೋಚ್ಚಾರ ಮಾಡುವ ಯೋಗ್ಯತೆಗೂ ಎರವಾಗಿದ್ದೇವೆನ್ನುವ ಕೊರಗು ಇದೆ ಜನ್ಮ ಐಶ್ವರ್ಯ ಶ್ರುತ ಶ್ರೀಭಿಃ ಏಧಮಾನಮದಃ ಪುಮಾನ್ ನೈವ ಅರ್ಹತಿ ಅಭಿಧಾತುಂ.

ನಿಜಕ್ಕೆ ಪರ್ಯಾಯಗಳನ್ನು ಸೃಷ್ಟಿಸುವುದೇ ಈ ಲೋಕದ ಸ್ವಭಾವವೋ ಎಂಬ ಸಂದೇಹವಿದೆ.

ಹೇಳಿಕೊಳ್ಳುವುದಕ್ಕೆ ತನ್ನದೆನ್ನುವುದು ಏನೂ, ಯಾವುದೂ ಇಲ್ಲದವರಿಗೆ, ತಮ್ಮ ನಾಮವೇ ತಮಗೆ ಕೀಳರಿಮೆಯನ್ನುಂಟು ಮಾಡುವ ಸ್ಥಿತಿಯಲ್ಲಿ ರುವವರಿಗೆ, ಸತ್ಯವೇ. ಅದರ ನಾಮವೇ ನಿಜವಾದ ಸಂಪತ್ತಾಗಿ ಒದಗಿ ಬರುತ್ತದೆನ್ನುವ, ಸತ್ಯದ ಸೌಲಭ್ಯದ ಬಗೆಗೆ ಸರಳ ಸದಾಶಯವಿದೆ ಅಕಿಂಚನಗೋಚರಂ. ಇಂಥ ಸತ್ಯ, ಮಾನುಷ ರೂಪದಲ್ಲಿ, ಕೃಷ್ಣನಾಗಿ ನಮ್ಮ ನಡುವೆ ನಡೆದಾಡುತ್ತಿದೆಯಲ್ಲ ಎಂಬ ಅಚ್ಚರಿ ಇದೆ. ಕುಂತಿಯಲ್ಲಿ ಯಶೋದೆ ಹೇಳಿದ ಕೃಷ್ಣನ ಶೈಶವದ ತುಂಟಾಟದ ನೆನಪುಗಳಿವೆ. ನಿನ್ನ ತುಂಟತನ ಅತಿಯಾಯ್ತು, ನಿನ್ನನ್ನು ಹಗ್ಗದಲ್ಲಿ ಕಟ್ಟಿ ಹಾಕಿ ಬಿಡುವೆ ಎಂದು ಯಶೋದೆ ಗದರಿದಾಗ ಆ ಗದರಿಕೆಗೆ ಹೆದರಿ, ಕಣ್ಣಿಗೆ ತೀಡಿದ ಕಾಡಿಗೆ ಕರಗುವಂತೆ ಅಲುಗರೆಯುತ್ತ ಭಯವನ್ನು ನಟಿಸಿದ ಎಳೆಯ ಹುಡುಗ ಎಲ್ಲರ ಭಯವನ್ನು ನಿವಾರಿಸುವ ಭಗವಂತನೇ ಆಗಿದ್ದನೆಂದರೆ ಇದೇನು! ಎಂಬ ವಿಸ್ಮಯಾತಿಶಯವಿದೆ.

ನಮ್ಮ ಮನಸ್ಸಿನ ಕಟ್ಟುಗಳನ್ನು ಹರಿದು ಬಿಡಗಡೆಗೊಳಿಸಬಲ್ಲವನು ತಾನು ಹೆದರಿಕೊಂಡ ಆ ಮುಗ್ಧಚಿತ್ರ ತನ್ನಲ್ಲಿ ಇನ್ನಿಲ್ಲದ ಮೋಹದ ಅಲೆಗಳನ್ನು ಎಬ್ಬಿಸುತ್ತದೆ ಎನ್ನುವ ಭಾವೋದ್ವೇಗ ಇದೆ.

ಈ ಎಲ್ಲದೆ ನಡುವೆ ಈ ಮಾತು:

ವಿಪದಃ ಸಂತು ನಃ ಶಶ್ವತ್ ತತ್ರ ತತ್ರ ಜಗದ್ಗುರೋ |

ಭವತೋ ದರ್ಶನಂ ಯತ್ ಸ್ಯಾತ್ ಅಪುನರ್ಭವದರ್ಶನಮ್ || - ಎಂಬ ಹೊಳೆ-ಹೊಳೆಯುವ ಮಾತು.

ಬದುಕಿನಲ್ಲಿ ಕಷ್ಟಗಳು ದುಃಖಗಳು (ವಿಪದಃ) ಮತ್ತೆ ಮತ್ತೆ ಒದಗಿ ಬರಲಿ. ಅಲ್ಲೊಂದು ದೊಡ್ಡ ಪಾಠವಿದೆ. ಈ ಪಾಠ ಕಲಿಸುವ ನೀನು ನಿಜಕ್ಕೂ ಜಗದ್ಗುರು!

ಏನು ಪಾಠವೆಂದರೆ ಕಷ್ಟಗಳು ಬಂದಾಗ ನಿನ್ನ ನೆಪಾಗುತ್ತೆ. (ಕಷ್ಟ ಬಂದಾಗ ಯಾರ ನೆನಪಾಗುತ್ತೆ ಅವನು ತಾನೇ ನಿಜವಾದ ಸಖ!) ಆ ನೆನಪಿನಗುಂಟ ನೀನು ನಡೆದು ಬರುತ್ತಿ. ನಿನ್ನ ದರ್ಶನವಾಯಿತೆಂದರೆ ಜನ್ಮವೆ ಉಪಸಂಹಾರಗೊಂಡ ಹಾಗೆ. ಮತ್ತೆ ಹುಟ್ಟಿಲ್ಲ. ಯಾಕೆ ಹುಟ್ಟಬಾರದೆಂದರೆ ಇನ್ನೇನಿಲ್ಲ- ಹುಟ್ಟು ನಿನ್ನ ಮರೆವನ್ನು ಉಂಟು ಮಾಡುತ್ತೆ. ನಿನ್ನೊಡಲಲ್ಲಿ ಇದ್ದೇನೆ; ನೀನು ಪೊರೆಯುವವನು. ಈ ಸತ್ಯವನ್ನು ಮರೆಯುವುದೇ ನಿಜವಾದ ವಿಪತ್ತು. ನಿಜವಾದ ವಿಪತ್ತು ಏಕೆಂದರೆ ಈ ಮರೆವು ಪ್ರಜ್ಞೆಯ ಕೇಂದ್ರದಲ್ಲಿಯೇ ನಡೆಯುವ ವಿಪರ್ಯಾಸ. ಮರೆತು ಬಿಡುವುದೆಂದರೆ ಒಡಲಿನಿಂದ ಹೊರಗೆ ಬಂದಂತೆ. ಒಡಲಿನಿಂದ ಹೊರಗೆ ಬರುವುದು ತಾನೇ ಹುಟ್ಟು ಎಂದರೆ? ಅದು ಹೊಕ್ಕುಳ ಬಳ್ಳಿ ತುಂಡರಿಸಿ ತಾನು ಬೇರೆಯಾದಂತೆ ಅಲ್ಲವೆ? ಬೇರೆಯಾಗುವುದೆಂದರೆ ನಿಜಕ್ಕೂ ಅನಾಥವಾದಂತೆ. ಸ್ವತಂತ್ರನಾದಂತೆ ಅಲ್ಲ. ಬೇರೆಯಾದರೆ ಸ್ವತಂತ್ರನಾದಂತೆ ಎಂಬ ಮನೋಭಾವನೆಯೊಂದು ದೊಡ್ಡ ಭ್ರಮೆ. ಉತ್ತರೆಯ ಒಡಲಿನ ಕುಡಿಯನ್ನು ಪೊರೆದು ಈ ನಿಜವನ್ನು ಕಾಣಿಸಿದೆ. ನಿನ್ನೊಡಲಿನಿಂದ ಹೊರಬಂದೆವೆನ್ನುವ ಹುಸಿಯನ್ನು ಕಾಣಿಸುವ ಈ ಹುಟ್ಟು ಇನ್ನು ಬೇಕಿಲ್ಲ.

ಕುಂತಿಯ ಈ ಹೃದ್ಗತದ ಹಿಂದೆ ಎಂಥ ದಾರುಣವಾದ ಸಾಂಸಾರಿಕ ಅನುಭವ ಇದೆ ಎಂದು ಬೇರೆ ಹೇಳಬೇಕಿಲ್ಲ.

ಅಚ್ಚರಿ ಎಂದರೆ ಇದು ಕೃಷ್ಣನದೇ ಮಾತುಗಳ ಇನ್ನೊಂದು ಮುಖ, ರೂಪಾಂತರವಾಗಿರುವ ಸಾಧ್ಯತೆ. ಗೀತೆಯಲ್ಲಿ ಕೃಷ್ಣ ಹೇಳಿದ್ದ, ಧರ್ಮದಗ್ಲಾನಿಯಾದಾಗ ಅಧರ್ಮ ತಲೆ ಎತ್ತಿ ಮೆರೆಯುತ್ತಿರುವಾಗಲೆಲ್ಲ ನಾನು ಬರುತ್ತೇನೆ. ಧರ್ಮದ ಗ್ಲಾನಿ ಎಂದರೆ ಸರಳವಾಗಿ ಏನು? ಸಜ್ಜನರಿಗೆ ಬದುಕು ಕಷ್ಟವಾಗೋದು. ಆದುದರಿಂದಲೇ ಪರಿತ್ರಾಣಾಯ ಸಾಧೂನಾಂ- ಸಜ್ಜನರ ರಕ್ಷಣೆಯೇ ಧರ್ಮ ಎಂಬ ಮಾತು ಬಂದಿತ್ತು.

ಈಗ ಕುಂತಿ ಹೇಳುತ್ತಿದ್ದಾಳೆ: ಕಷ್ಟಗಳು ಮತ್ತೆ ಮತ್ತೆ ಒದಗಲಿ! ಪಾಂಡವರು ಕುಂತಿ- ಸಜ್ಜನರಲ್ಲವೆ. ಸಜ್ಜನರೆಂದರೆ ಹೀಗೆ. ಭಗವಂತನ ಮಾತಿಗೆ ಒಂದು ರೂಪಾಂತರವನ್ನು ಇವರು ಒದಗಿಸುವರು. ಕೃಷ್ಣನ ಮಾತುಗಳಲ್ಲಿಲ್ಲದ ಧ್ವನಿಶಕ್ತಿ ಕುಂತಿಯ ಮಾತುಗಳಲ್ಲಿದೆ. ರಕ್ಷಣೆ ಎಂದರೇನೆಂಬುದರ ಹೊಳಹು ಇಲ್ಲಿದೆ. ಅಥವಾ ಭಗವಂತನಿಗೂ ಬದುಕಿನ ಕಷ್ಟಗಳನ್ನು ನೀಗಲಿಕ್ಕಾಗದ ಸ್ಥಿತಿಯನ್ನು ಹೊಟ್ಟೆಯಲ್ಲಿ ಹಾಕಿಕೊಂಡು ಕುಂತಿ ಹೇಳಿದ ಮಾತಿದು! ಮತ್ತೆ ಮತ್ತೆ ಬರುತ್ತೇನೆ ಎಂದಿದ್ದನಲ್ಲ ಕೃಷ್ಣ. ಅಷ್ಟು ಸಾಕು. ಆ ಮಾತು ಸಾಲದೆ? ಎಂದಳು ಕುಂತಿ. ಕುಂತಿಯ ಮಾತು ದೇವರನ್ನೇ ಧಾರಣ ಮಾಡಿದ ಮಾತು. ಮಾತಿನ ಧಾರಣ ಶಕ್ತಿ ಅದ್ಭುತ!

■ **ತೋಪ**

## ಮಾತೇ ಮುತ್ತು

★ ನಿಮ್ಮ ಹೃದಯದೊಳಕ್ಕೆ ಇಣುಕಿದರೆ ಗುರಿ ಸ್ಪಷ್ಟವಾಗುತ್ತದೆ. ಹೊರಗೆ ನೋಡುವವನು ಕನಸಿನಲ್ಲಿರುತ್ತಾನೆ. ಒಳಗೆ ಇಣುಕುವವನು ಎಚ್ಚರದಿಂದ ಇರುತ್ತಾನೆ.

-ಕಾರ್ಲ್ ಜಂಗ್

★ ಶಾಂತ ಮನಸ್ಸು ಆತ್ಮವಿಶ್ವಾಸ ಮತ್ತು ಅಂತರ್‌ಶಕ್ತಿಯನ್ನು ಹೆಚ್ಚಿಸುತ್ತದೆ. ಉತ್ತಮ ಆರೋಗ್ಯಕ್ಕೆ ಅದು ಅಗತ್ಯ.

-ದಲೈ ಲಾಮಾ

★ ಭಯವನ್ನು ಗೆಲ್ಲಬೇಕೆಂದರೆ ಮನೆಯಲ್ಲಿ ಕುಳಿತುಕೊಳ್ಳಬೇಡಿ. ಮನೆಬಿಟ್ಟು ಹೊರಡಿ, ಕಾರ್ಯತತ್ಪರರಾಗಿ.

- ಡೇಲ್ ಕಾರ್ನೆಗಿ

★ ಕೆಡುಕು ವಿಜೃಂಭಿಸುತ್ತಿದೆ ಎಂದರೆ ಒಳ್ಳೆಯವರು ಸುಮ್ಮನೆ ಕುಳಿತಿದ್ದಾರೆ ಎಂದರ್ಥ.

-ಎಡ್ಮಂಡ್ ಬರ್ಕ್

★ ಕ್ರಾಂತಿಯೆಂದರೆ ಶೋಷಕರ ವಿರುದ್ಧ ಶೋಷಿತರ ಸರ್ವಾಧಿಕಾರ.

-ಫಿಡೆಲ್ ಕ್ಯಾಸ್ಟ್ರೊ

★ ಹೊಸ ಗೆಳೆಯರ ಬಗ್ಗೆ ಎಲ್ಲವನ್ನೂ ತಿಳಿದುಕೊಳ್ಳಲು ಪ್ರಯತ್ನಿಸು. ಹಳೆಯ ಗೆಳೆಯರ ಬಗ್ಗೆ ಎಲ್ಲವೂ ಗೊತ್ತಿರಲಿ.

—ಆಸ್ಕರ್ ವೈಲ್ಡ್